೧	೨	೩	೪	೫
೧೯	ಜಿಲ್ಲಾಧಿಕಾರಿ, ಉತ್ತರ ಕನ್ನಡ	೧೧೨	೧೪೭	,,
೨೦	ಗುಲ್ಬರ್ಗಾ ವಿಭಾಗಾಧಿಕಾರಿ ಗುಲ್ಬರ್ಗಾ	—	೧೦	,,
೨೧	ಗುಲ್ಬರ್ಗಾ, ಜಿಲ್ಲಾಧಿಕಾರಿ	೩೪	೧೭೭	,,
೨೨	ಜಿಲ್ಲಾಧಿಕಾರಿ, ಬೀದರ್	೫೫	೧೦೧	,,
೨೩	ಜಿಲ್ಲಾಧಿಕಾರಿ, ರಾಯಚೂರು	..	೩೧	,,
೨೪	ಜಿಲ್ಲಾಧಿಕಾರಿ, ಬಳ್ಳಾರಿ,	೮೮	೧೧೫	,,
೨೫	ಧಾರ್ಮಿಕ ದತ್ತಿ	೩೫	೩೨	೫೦ ,,
೨೬	ಭೂಮಾಪನೆ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ	೫೮೭	೪೭೦೧	೫೬೩ ,,
೨೭	ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ	೧೨	೬	೧೦ ,,
೨೮	ನೋಂದಣಿ ಮತ್ತು ಸ್ಟ್ಯಾಂಪ್ಸ್	೧೨೯	೧೯೩	೧೨೦ ,,

ಲೋಕೋಪಯೋಗಿ, ಕಾಡಾ ಮತ್ತು ವಿದ್ಯುಚ್ಛಕ್ತಿ ಇಲಾಖೆ

೧	ಲೋಕೋಪಯೋಗಿ ಮತ್ತು ನೀರಾವರಿ	೬,೨೫೮	೪,೯೨೩	೪,೮೧೬
೨	ಬಂದರು ಮತ್ತು ಒಳನಾಡು ಜಲಸಾರಿಗೆ	೬೦	೭೧	೯೦
೩	ವಾಸ್ತುಶಿಲ್ಪ	೨೭	೨೭	೨೭
೪	ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ	೩೭	೫೬	೫೬

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

೧	ಆಡಳಿತ ತರಬೇತಿ ಸಂಸ್ಥೆ	೨೨	೧೧	೨೧
೨	ಸಚಿವಾಲಯ ತರಬೇತಿ ಸಂಸ್ಥೆ	೧	೧	೨
೩	ಸಚಿವಾಲಯ	೪೯೮	೩೧೬	೪೨೪
೪	ರಾಜ್ಯ ಅತಿಥ್ಯ ಸಂಸ್ಥೆ (ಕರ್ನಾಟಕ ಭವನ ನವದೆಹಲಿ ಒಳಗೊಂಡಂತೆ)	೧೪	೯	೫೭
೫	ಕರ್ನಾಟಕ ಆಡಳಿತ ನ್ಯಾಯಮಂಡಲಿ	—	—	೬೯
೬	ಲೋಕಾಯುಕ್ತ	೫೪	—	೧೫೩

ಸಂತಾನಹರಣ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡವರಿಗೆ ಆಡ್ವಾನ್ಸ್ ಇಂಕ್ರಿಮೆಂಟ್ ಕೊಡುವ ಬಗ್ಗೆ

೧೫೭. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ಸರ್ಕಾರವು ಆಗಿಂದಾಗ್ಗೆ ಪುನರ್ ವಿಮರ್ಶೆಯ ದಿನ ಭತ್ಯೆ, ಮನೆ ಬಾಡಿಗೆ ಭತ್ಯೆ ಹಾಗೂ ನಗರ ಪರಿಹಾರ ಭತ್ಯೆಗಳನ್ನು ಹಲವಾರು ತಿಂಗಳ ನಂತರ ಕೆ. ಎಸ್. ಆರ್. ಟಿ. ಸಿ.

ಆಡಳಿತ ಮಂಡಲಿಯ ವಜಾಂದಿಟ್ಟು ಅನುಮೋದನೆ ತೆಗೆದುಕೊಂಡರೂ ಸರ್ಕಾರೀ ಆದೇಶದ ದಿನದಿಂದಲೇ ಆಳವಡಿಸಿಕೊಂಡು ಹಿಂದಿನ ಬಾಕಿಯನ್ನೆಲ್ಲಾ ನೌಕರರಿಗೆ ಕೊಡುತ್ತಿರುವುದು ನಿಜವೇ ;

ಆ) ಆದರೆ ಇದೇ ನೀತಿಯನ್ನು ಸಂತಾನಹರಣ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡ ಕೆ. ಎಸ್. ಆರ್. ಟಿ. ಸಿ. ಯ ನೌಕರರಿಗೆ ಅನುಸರಿಸದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಇ) ಈ ರೀತಿ ದ್ವಂದ್ವ ನೀತಿಯನ್ನು ಅನುಸರಿಸುವ ಕೆ. ಎಸ್. ಆರ್. ಟಿ. ಸಿ. ಯ ಆಡಳಿತ ಮಂಡಲಿಯ ವಿರುದ್ಧ ಸರ್ಕಾರದವರು ತೆಗೆದುಕೊಳ್ಳುವ ನಿರ್ದಿಷ್ಟ ಕ್ರಮವೇನು ?

ಈ) ಹಾಗೆ ಕ್ರಮ ತೆಗೆದುಕೊಳ್ಳದಿದ್ದರೆ ಸರ್ಕಾರೀ ಆಜ್ಞೆ ಹೊರಬಿದ್ದ ನಂತರ ಸಂತಾನಹರಣ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಂಡ ಕೆ. ಎಸ್. ಆರ್. ಟಿ. ಸಿ. ಸಂಸ್ಥೆಯ ನೌಕರರಿಗೆ ಅವರು ಮಾಡಿಸಿಕೊಂಡ ದಿನದಿಂದಲೇ ಮುಂಗಡ ವಾರ್ಷಿಕ ಬಡ್ತಿಯನ್ನು ಮಂಜೂರು ಮಾಡಲಾಗುವುದೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು).—

ಅ) ಸರ್ಕಾರವು ತನ್ನ ನೌಕರರಿಗೆ ತುಟ್ಟಿ ಭತ್ಯ ಮನೆ ಬಾಡಿಗೆ ಭತ್ಯ, ನಗರ ಭತ್ಯದ ದರಗಳನ್ನು ಪರಿಷ್ಕರಿಸಿದಾಗ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಕೂಡ ಸರ್ಕಾರಿ ಆದೇಶದ ದಿನಾಂಕದಿಂದಲೇ ಯಾವುದೇ ವಿಳಂಬವಿಲ್ಲದೇ ತನ್ನ ನೌಕರರಿಗೆ ಕೈಗಾರಿಕಾ ಒಪ್ಪಂದದ ಪ್ರಕಾರ ನೀಡುತ್ತದೆ.

ಆ) ದಿನಾಂಕ ೧-೧೨-೮೫ ರಿಂದಲೇ ಸರ್ಕಾರಿ ಆಜ್ಞೆಯನ್ನು ಆಳವಡಿಸಿಕೊಂಡು ಸಂಸ್ಥೆಯು ಸಂತಾನಹರಣ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡ ನೌಕರರಿಗೆ ಒಂದು ಮುಂಗಡ ವಾರ್ಷಿಕ ವೇತನ ಬಡ್ತಿಯನ್ನು ನೀಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ದರೋಡೆ, ಲೂಟಿ ಇತ್ಯಾದಿ ಪ್ರಕರಣಗಳು ಹೆಚ್ಚಾಗುತ್ತಿರುವುದರ ಬಗ್ಗೆ ಹಾಗೂ ತಡೆಗಟ್ಟಲು ಕೈಗೊಂಡಿರುವ ಕ್ರಮಗಳು

೪೭೭. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಗೃಹ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ನಡೆದಿರುವ ಕೊಲೆ, ಲೂಟಿ ದರೋಡೆ ಕಳ್ಳತನ ಕೋವಂಂವಾರು ಘರ್ಷಣೆಗಳೆಷ್ಟು (ವಿವರಗಳನ್ನು ವರ್ಷವಾರು ಕೊಡುವುದು)

ಆ) ಈ ಪ್ರಕರಣಗಳು ಹೆಚ್ಚಾಗುತ್ತಿರುವುದನ್ನು ಗಮನಿಸಿ ಸರ್ಕಾರವು ಇವುಗಳನ್ನು ಕಂಡು ಹಿಡಿಯಲು ಹಾಗೂ ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು ?